


# GATE 2019

## GRADUATE APTITUDE TEST IN ENGINEERING

**Organizing Institute: Indian Institute of Technology Madras**

Online applications are invited for GATE 2019 examination. Admissions to Postgraduate Programs (Master's and Doctoral) with MHRD and other Government Scholarships/ Assistantships in Engineering/ Technology/ Architecture/ Science are open to those who qualify in GATE. The GATE score is also used by some PSUs for the recruitment. GATE 2019 score will be valid for THREE YEARS. Examination for all the papers will be Computer Based Test.

**Dates of Examination: 2nd, 3rd, 9th & 10th February, 2019**

For details on GATE, application fee, filling and submission of online application form, please visit the following website.

Submission of online application :
Opening Date : 1st September, 2018
Closing Date : 21st September, 2018

**http://gate.iitm.ac.in**

IIT Madras is not responsible for printing errors, if any

Pg. No. 8

www.varthabharati.in
ಜನದನಿಯ ಸಾರಥಿ
epaper.varthabharati.in

# ವಾರ್ತಾ ಭಾರತಿ

ಸತ್ಯ ಎಲ್ಲರಿಗೆ

◆ಮಂಗಳೂರು ◆ಬೆಂಗಳೂರು ◆ಶಿವಮೊಗ್ಗ
26 ಆಗಸ್ಟ್ 2018
ರವಿವಾರ
VARTHABHARATHI KANNADA DAILY

Best Price Guaranteed
FURNITURE MALL
UDUPI : Kadiyali,
MANGALORE : Kottara Ch
SHIMOGA : BH Road,

# 9 ಇಂಜಿನಿಯರಿಂಗ್ ಕಾಲೇಜುಗಳು ಅನುದಾನಕ್ಕೆ ಆಯ್ಕೆ

ಬೆಂಗಳೂರು, ಆ.25: ತಾಂತ್ರಿಕ ಶಿಕ್ಷಣಗುಣಮಟ್ಟ ಉನ್ನತೀಕರಣ ಯೋಜನೆ(ಟೆಕಿಪ್) ಅಡಿ ನೀಡುವ ಅನುದಾನಕ್ಕೆ ರಾಜ್ಯದ 9 ಇಂಜಿನಿಯರಿಂಗ್ ಕಾಲೇಜು ಹಾಗೂ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ (ವಿಟಿಯು) ಆಯ್ಕೆಗೊಂಡಿವೆ.

9 ಕಾಲೇಜು ಮತ್ತು 1 ವಿಟಿಯುಗೆ ತಲಾ 7 ಕೋಟಿ ರೂ. ಅನುದಾನ ದೊರೆಯಲಿದೆ. ಟೆಕಿಪ್ 3ನೇ ಹಂತದ ಯೋಜನೆ ಇದಾಗಿದ್ದು, ಅನುದಾನವನ್ನು ವಿಶ್ವಬ್ಯಾಂಕ್ ನೀಡಲಿದೆ. ಈ ಸಂಬಂಧದ ಒಪ್ಪಂದಕ್ಕೆ ರಾಜ್ಯ ಉನ್ನತ ಶಿಕ್ಷಣ ಸಚಿವ ಜಿ.ಟಿ.ದೇವೇಗೌಡ ಮತ್ತು ವಿಶ್ವಬ್ಯಾಂಕ್ ಪ್ರತಿನಿಧಿ ಫ್ರಾನ್ಸಿಸ್ ಸಹಿ ಹಾಕಿದ್ದಾರೆ.

ಈ ವೇಳೆ ಮಾತನಾಡಿದ ದೇವೇ ಗೌಡ, ಆವಿಷ್ಕಾರದಲ್ಲಿ ನಮ್ಮ ರಾಜ್ಯ ಮುಂದಿದೆ. ತಾಂತ್ರಿಕತೆಗೆ ಹೊಸ ಆಲೋಚನೆಗಳನ್ನು ತನ್ನದಾಗಿಸಿಕೊಂಡು ಅದಕ್ಕೆ ಅನುಗುಣವಾಗಿ ಶಿಕ್ಷಣವನ್ನು ನೀಡಿ ಹೊಸ ಪೀಳಿಗೆ ಸೃಷ್ಟಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು.

ವಿಶ್ವ ಬ್ಯಾಂಕ್‌ನ ಪ್ರತಿನಿಧಿ ಫ್ರಾನ್ಸಿಸ್ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಪರಿಶೀಲಿಸಿದಾಗ ಭಾರತ ದ್ವಿತೀಯ ಸ್ಥಾನದಲ್ಲಿದೆ. ಅದೇ ಮಾದರಿಯಲ್ಲಿ ಸವಾಲುಗಳು ಕೂಡ ಇವೆ. ರಾಜ್ಯ ಸರಕಾರ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಬಗ್ಗೆ ಹೆಚ್ಚಿನ ಗಮನಹರಿಸಬೇಕು ಎಂದು ಸಲಹೆ ನೀಡಿದರು. ಈ ವೇಳೆ ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕ ಎಚ್.ಯು. ತಳವಾರ ಉಪಸ್ಥಿತರಿದ್ದರು.

## ಆಯ್ಕೆಗೊಂಡಿರುವ ಕಾಲೇಜುಗಳು

- ಬಿಎಂಎಸ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು
- ಡಾ.ಬಿ.ಆರ್.ಅಂಬೇಡ್ಕರ್ ಕಾಲೇಜು, ಬೆಂಗಳೂರು
- ಎಸ್‌ಜೆಸಿಇ ಕಾಲೇಜು ಆಫ್ ಇಂಜಿನಿಯರಿಂಗ್, ಮೈಸೂರು
- ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಮೈಸೂರು
- ಪಿಇಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್, ಮಂಡ್ಯ
- ಮಲ್ನಾಡ್ ಕಾಲೇಜ್ ಆಫ್ ಇಂಜಿನಿಯರಿಂಗ್, ಹಾಸನ
- ಪಿಡಿಎ ಕಾಲೇಜ್ ಆಫ್ ಇಂಜಿನಿಯರಿಂಗ್, ಕಲಬುರಗಿ
- ಬಿವಿಬಿ ಕಾಲೇಜ್ ಆಫ್ ಇಂಜಿನಿಯರಿಂಗ್, ಹುಬ್ಬಳ್ಳಿ
- ಬಸವೇಶ್ವರ ಕಾಲೇಜ್ ಆಫ್ ಇಂಜಿಯರಿಂಗ್, ಬಾಗಲಕೋಟೆ
- ವಿಶ್ವೇಶ್ವರಯ್ಯ ತಾಂತ್ರಿಕ ವಿವಿ, ಬೆಳಗಾವಿ